ಒಂದು ವರ್ಷದೊಳಗೆ ಬಂದಿರುವಂಥಾದ್ದಕ್ಕೆ ಬೇಡಿಕೆ ಇರುತ್ತದೆ ಎಂದು ನಾವು ಕೊಟ್ಟಿದ್ದೇವೆ. ಅವರಿಗೆ ಒಂದು ಕಂಟ್ರೋಲ್ ರೂಮ್ ಎಂದು ಇರುತ್ತದೆ. ಅಲ್ಲಿಂದ ಅವರಿಗೆ ವೈರ್‌ಲೆಸ್ ರೇಡಿಯೊ ಸೆಟ್ ಇರುತ್ತದೆ. ಅವರಿಗೆ ತಿಳಿಸಿದಾಗ ಅವರು ಮನೆಯ ಬಾಗಿಲಿಗೆ ಬಂದು ಸರ್ವಿಸ್ ಕೊಡುವಂಥಾದ್ದು, ಆ ದೃಷ್ಟಿಯಲ್ಲಿ ಇದು ಬಹಳ ಚೆನ್ನಾಗಿ ಇದೆ. ಇದನ್ನು ಬಹಳ ಜನ ನಿರುದ್ಯೋಗಿ ಯುವಕರು ಇದು ಚೆನ್ನಾಗಿದೆ ಎಂದು ಹೇಳಿದ್ದಾರೆ. ನಮಗೆ ಸಂಪಾದನೆ ಚೆನ್ನಾಗಿದೆ, ಮತ್ತು ಬೇಡಿಕೆ ಇದೆ ಮತ್ತು ಸರ್ವಿಸ್ ಕೊಡುತ್ತೇವೆಂದು ಹೇಳಿದ್ದಾರೆ. ನಾವು ಬೆಂಗಳೂರಿನಲ್ಲಿ ಎಷ್ಟು ಕೇಳಿದರೂ ನಾವು ಕೊಡುತ್ತೇವೆ. ಅದಕ್ಕೆ ಒಂದು ತಜ್ಞರ ಸಮಿತಿಯನ್ನು ಮಾಡಿದ್ದೇವೆ. ಅವರು ಅದನ್ನು ಯಾವ್ಯಾವ ರೀತಿಯಲ್ಲಿ ಕೊಡಬೇಕೆಂದು ಇದೆ, ಆದುದರಿಂದ ನಾವು ಕೊಡುವಂಥಾದ್ದಕ್ಕೆ ಏನು ಅಡ್ಡಿಯಿಲ್ಲ, ಎಷ್ಟು ಬೇಕಾದರೂ ಕೊಡುತ್ತೇವೆ. ನಾವು ಉತ್ತರದಲ್ಲಿ 7 ರೇಡಿಯೋ ಟ್ಯಾಕ್ಸಿ ಎಂದು ಹೇಳಿದ್ದವು, ಅದು ಇತ್ತೀಚೆಗೆ 25ಕ್ಕೆ ಹೆಚ್ಚಿಸಿದ್ದೇವೆ. ಇದರಲ್ಲಿ ಬಂದಿರುವಂತಹ ಆದಾಯ 43,992 ರೂಪಾಯಿಗಳು, ಈಗ 1,92,000 ರೂಪಾಯಿಗಳು ಬಂದಿದೆ.

ಗುಳ್ಳೇದಗುಡ್ಡ ಕ್ಷೇತ್ರದ ಗುಡೂರ ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್‌ನಿಲ್ದಾಣದ ನಿರ್ಮಾಣ.

53(364) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳ್ಳೇದಗುಡ್ಡ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತಕ್ಷೇತ್ರದ ಗುಡೂರ ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸರ್ಕಾರ ಇದುವರೆಗೂ ಕೈಗೊಂಡಿರುವ ಕ್ರಮಗಳೇನು;

ಇ) ಗುಡೂರು ಹಾಗೂ ಐಹೊಳೆ ಗ್ರಾಮಗಳಲ್ಲಿ ಬಸ್ ನಿಲ್ದಾಣಕ್ಕಾಗಿ ಗ್ರಾಮಸ್ಥರು ಉಚಿತವಾಗಿ ಜಾಗ ನೀಡಲು ಸಿದ್ದರಿದ್ದರೂ ಸರ್ಕಾರ ಈ ಬಗ್ಗೆ ನಿರ್ಲಕ್ಷಿಸುತ್ತಿರಲು ಕಾರಣಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬಂದಿದೆ.

ಆ) ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಜಾಗವನ್ನು ಪಡೆಯಲು ಸಂಸ್ಥೆಯು ಪರಿಶೀಲಿಸುತ್ತಿದೆ.

ಇ) ಗುಡೂರ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಅತ್ಯಾವಶ್ಯಕವಿರುವ 1 ಎಕರೆ 21 ಗುಂಟೆ ಜಮೀನನ್ನು ದಾನದ ರೂಪದಲ್ಲಿ ನೀಡಲು ಗ್ರಾಮಸ್ಥರು ಈಗ ಮುಂದೆ ಬಂದಿದ್ದು ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರ ಮುಂದಿನ ಕ್ರಮ

ಜರುಗಿಸಲಾಗುವುದು. ಐಹೊಳೆ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸಲು 175X70 ನಿವೇಶನವನ್ನು, ಗ್ರಾಮಪಂಚಾಯಿತಿ ನೀಡಲು ಮುಂದೆ ಬಂದಿದ್ದು ಈ ಸ್ಥಳವು ಬಸ್ ನಿಲ್ದಾಣ ನಿರ್ಮಿಸಲು ಸೂಕ್ತವಾಗಿಲ್ಲ. ಅಲ್ಲದೆ ಈ ಗ್ರಾಮ ಪ್ರದೇಶದ ಬಹುತೇಕ ಭಾಗವು ಭಾರತೀಯ ಪುರಾತತ್ವ ಭೂಮಾನ ಇಲಾಖೆಯ ಅಧೀನದಲ್ಲಿದ್ದು ಸೂಕ್ತ ಜಮೀನು ಹಂಚಿಕೆ ಮಾಡಲು ಆ ಇಲಾಖೆಯೊಂದಿಗೆ ಸಂಪರ್ಕಿಸಲಾಗಿದೆ.

ಶ್ರೀ ಬಿ.ಬಿ. ಶಿವಪ್ಪ (ಶ್ರೀ ರಾಜಶೇಖರ ಶೀಲವಂತ ವೀರಣ್ಣನವರ ಪರವಾಗಿ):— ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರದಲ್ಲಿ ಸದರಿ ಗ್ರಾಮಗಳಲ್ಲಿ ಬಸ್‌ನಿಲ್ದಾಣವನ್ನು ನಿರ್ಮಿಸಲು ಜಾಗವನ್ನು ಪಡೆಯಲು ಸಂಸ್ಥೆಯು ಪರಿಶೀಲಿಸುತ್ತಿದೆ, ಎಂದು ಹೇಳಿದ್ದಾರೆ. ಮತ್ತೆ ಗುಡೂರ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲು ಒಂದು ಎಕರೆ 21 ಗುಂಟೆ ಜಮೀನನ್ನು ದಾನದ ರೂಪದಲ್ಲಿ ನೀಡಲು ಗ್ರಾಮಸ್ಥರು ಮುಂದೆ ಬಂದಿದ್ದಾರೆಂದು ಹೇಳಿದ್ದಾರೆ. ಅಂದರೆ ಈ ಗ್ರಾಮಸ್ಥರು ಈ ಒಂದು ಎಕರೆ 21 ಗುಂಟೆ ಜಾಗವನ್ನು ಕೊಡಲು ಮುಂದೆ ಬಂದಿದ್ದು ಯಾವಾಗ? ಮತ್ತೆ ಈ ಕಾರ್ಯಕ್ರಮವನ್ನು ಯಾವಾಗ ತೆಗೆದುಕೊಳ್ಳುತ್ತೀರಿ? ಇದನ್ನು ಈ ವರ್ಷದಲ್ಲೇ ಎಂದರೆ 1999-2000ನೇ ಇಸ್ವಿಯಲ್ಲಿ ನಿರ್ಮಿಸಿ ಕೊಡುತ್ತೀರಾ? ಮತ್ತೊಂದು ಪ್ರಶ್ನೆ ಐಹೊಳೆ, ಪಟ್ಟದಕಲ್ಲು, ಬಾದಾಮಿ, ಇವೆಲ್ಲಾ ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರೇಕ್ಷಣೀಯ ಸ್ಥಳವಾಗಿದೆ. ಇಲ್ಲಿಗೆ ಯಾರು ಬಂದರೂ ಹೋಗುವಂಥಾದ್ದು ಇದೆ. ಆದರೆ ಅಲ್ಲಿ ಸರಿಯಾಗಿ ಬಸ್ ನಿಲ್ದಾಣ ಇಲ್ಲ, ಮತ್ತೆ ಜಾಗವೂ ಸಾಲದು, ಪ್ರಾಚ್ಯವಸ್ತು ಇಲಾಖೆಯವರೊಡನೆ ಪತ್ರ ವ್ಯವಹಾರ ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇದು ಅತ್ಯಾವಶ್ಯಕವಾಗಿ ಬೇಕಾಗಿದೆ ಎಂಬುದು ತಮಗೂ ಗೊತ್ತಿದೆ. ಇದರ ಬಗ್ಗೆ ತಾವು ಯಾವಾಗ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಯವರು ದಯಮಾಡಿ ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಈ ಗುಡೂರ ಹಾಗೂ ಐಹೊಳೆ ಗ್ರಾಮಗಳು ಆರ್ಕೆಲಾಜಿಕಲ್‌ನವರ ಕಂಟ್ರೋಲ್‌ನಲ್ಲಿದೆ. ಅವರು ಗುಡೂರದಲ್ಲಿ ಮೊದಲು ನಮಗೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದರು. ಅವರು ಮೊದಲು ಒಂದು ಎಕರೆ 21 ಗುಂಟೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದರು, ನಂತರ ಒಂದು ಎಕರೆಯನ್ನು ಕೊಡುತ್ತೇವೆಂದು ಹೇಳಿದರು. ಈಗ ಅವರು ಜಾಗವನ್ನು ಮುಂದೆ ಕೊಡುವುದಿಲ್ಲ, ಹಿಂದೆ ಕೊಡುತ್ತೇವೆ ನೀವು ಅಲ್ಲಿ ಬಸ್‌ಸ್ಟ್ಯಾಂಡ್ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಅದು ಆ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮಗೆ ಭೂಮಿಯನ್ನು ಕೊಟ್ಟರೆ ಮಾಡುವುದಕ್ಕೆ ಏನೂ ಅಡ್ಡಿಯಿಲ್ಲ. ಐಹೊಳೆಯಲ್ಲಿ 175X70ಕೊಟ್ಟಿದ್ದಾರೆ, ಅಷ್ಟು ಸಾಕಾಗುವುದಿಲ್ಲ. ಈಗ ಆರ್ಕೆಲಾಜಿಕಲ್ ಸರ್ವೆ ಆಫ್ ಇಂಡಿಯಾದವರೊಡನೆ ಸರ್ವೆ ಮಾಡಿದ್ದೇವೆ, ಜಾಗವನ್ನು ನಮಗೆ ಕೊಡಿ ಎಂದು ಕರೆಸ್ಪಾಂಡೆನ್ಸ್ ಆಗಿದೆ. ನಮ್ಮ ಸದಸ್ಯರು ಆ ಭೂಮಿಯನ್ನು ಒಪ್ಪಿಕೊಂಡರೆ ನಾವು ಪ್ರತ್ಯೇಕವಾಗಿ ಮಾತನಾಡಿ ಬಸ್

ಸ್ಟ್ಯಾಂಡ್ ಮಾಡುತ್ತೇವೆ, ಅದರಲ್ಲಿ ಏನೂ ಅಡ್ಡಿ ಇಲ್ಲ. ಇವರು ಮೊದಲು ಕೊಡುತ್ತೇವೆಂದು ಹೇಳಿದ ಜಾಗವನ್ನು ಕೊಡದೇ ಈಗ ಒಂದು ಎಕರೆಯನ್ನು ಅದು ಹಿಂದಕ್ಕೆ ಬಸ್ ಸ್ಟ್ಯಾಂಡ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ನಮಗೆ ಆ ಗುಡೂರ ಗ್ರಾಮಕ್ಕೆ ಒಂದು ಎಕರೆ ಜಾಗ ಸಾಕಾಗುವುದಿಲ್ಲ. ಇನ್ನು ಐಹೊಳೆ ಅದಕ್ಕೆ ನಾವು ಮಾಡುತ್ತೇವೆ. ಈ ಎರಡು ಜಾಗಕ್ಕೂ ಬಸ್ ಸಂಚಾರವಿದೆ, ನಾವು ಇದನ್ನು ಮಾಡುತ್ತೇವೆ. ಮುಖ್ಯವಾಗಿ ನಮಗೆ ಭೂಮಿ ಬೇಕಾಗಿದೆ,

ಶ್ರೀ ಬಿ.ಬಿ. ಶಿವಪ್ಪ :— ಈಗ ಖಾಸಗಿಯವರು ಒಂದೂವರೆ ಎಕರೆ ಜಾಗವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ, ಆ ಬಸ್ ನಿಲ್ದಾಣದ ಕೆಲಸವನ್ನು ತೆಗೆದುಕೊಳ್ಳಬಹುದಲ್ಲವೆ? ಆ ಜಾಗ ಸಿಕ್ಕರೆ ತೆಗೆದುಕೊಳ್ಳಬಹುದಲ್ಲವೇ?

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಮೊದಲು ಅವರು ಒಂದು ಎಕರೆ 21 ಗುಂಟೆ ಜಾಗವನ್ನು ಕೊಡುತ್ತೇವೆಂದು ಹೇಳಿದ್ದರು. ಈಗ ನಾವು ಮುಂದೆ ಅಂಗಡಿಗಳನ್ನು ಹಾಕಿಕೊಳ್ಳುತ್ತೇವೆ, ಹಿಂದೆ ಒಂದು ಎಕರೆ ಜಾಗವನ್ನು ಕೊಡುತ್ತೇವೆ, ನೀವು ಅಲ್ಲಿ ಬಸ್ ನಿಲ್ದಾಣವನ್ನು ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಒಳಗಡೆ ಹೋಗುವುದಕ್ಕಾಗುವುದಿಲ್ಲ, ನಮ್ಮವರು ಅಲ್ಲಿ ಹೋಗಿ ನೋಡಿಕೊಂಡು ಬಂದು ನಮಗೆ ರಿಪೋರ್ಟ್ ಕೊಟ್ಟಿದ್ದಾರೆ. ನಾವು ಮೊದಲು ಕೇಳಿದ ಹಾಗೆ ಒಂದು ಎಕರೆ 21 ಗುಂಟೆ ಭೂಮಿಯನ್ನು ಕೊಟ್ಟರೆ ಅಲ್ಲಿ ಮಾಡಬಹುದು.

ಶ್ರೀ ಬಿ.ಬಿ. ಶಿವಪ್ಪ :— ನಾವು ಈಗಲೇ ಕೊಟ್ಟರೆ ಕೆಲಸ ಪ್ರಾರಂಭ ಮಾಡುತ್ತಿರಾ?

ಶ್ರೀ ಬಿ.ಎನ್. ಬಚ್ಚೇಗೌಡ :— ನಾವು ಇದನ್ನು 1999-2000ನೇ ಇಸ್ವಿಯಲ್ಲಿ ತೆಗೆದುಕೊಂಡು ಮಾಡುತ್ತೇವೆ.

ಪಾಂಡವಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣ.

50(299) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಪಾಂಡವಪುರ ಜಿಲ್ಲೆ ಉಪ ವಿಭಾಗದ ಮುಖ್ಯ ಕೇಂದ್ರವಾಗಿದ್ದು ಬಸ್ ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?